ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಲ್ಲಿ ಮಳೆಯೇ ಇಲ್ಲದೆ ಆಹಾರಸಾಮಗ್ರಿಗಳಿಗೆ ಕೊರತೆಯಾಗಿರುವ ಈ ಕಾಲದಲ್ಲಿ ಆಹಾರಸಾಮಗ್ರಿಗಳನ್ನು ಅವರಿಗೆ ಕೊಡುವುದರಿಂದ ಅನುಕೂಲವಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಮಳೆ ಚೆನ್ನಾಗಿ ಆಗಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ದವಸವೂ ಕೂಡ ಅಲ್ಲಿ ಸುಟ್ಟುಹೋಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಪಟ್ಟಿ ಮಾಡಿ ಏನೇನು ಬೇಕೆಂದು ಹೇಳಿದರೆ, ಏನೇನು ಪರಿಹಾರ ಕೊಡುವುದಕ್ಕೆ ಸಾಧ್ಯವೋ ಅದನ್ನು ಕೊಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಆ ತಾಲ್ಲೂಕಿನಲ್ಲಿರತಕ್ಕ ಹುಲ್ಲಿನ ಮನೆಗಳನ್ನು ತೆಗೆದು ಹೆಚಿನ ಮನೆಗಳನ್ನಾಗಿ ಮಾಡಬೇಕೆಂದು ಕಡ್ಡಾಯವಾಗಿ ವಿಧಾಯಕ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಯಾವುದನ್ನೂ ಹೇಳಲಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನಿಮ್ಮ ತರಗತಿಗಳವರಿಗೆ ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಕೊಡುತ್ತಿದ್ದೀರಲ್ಲ, ಆ ಹಣವನ್ನು ಇಲ್ಲಿ ಮನೆ ಸುಟ್ಟು ಹೋಗಿರುವವರಿಗೆ ಕೊಡುವುದಕ್ಕೆ ಪ್ರಥಮ ಸ್ಥಾನ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ತರಗತಿಯವರಾಗಿದ್ದರೆ ಕೊಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಹಳ್ಳಿಗಳಲ್ಲಿ ಅನೇಕ ಸಾರಿ ಕುಡಿಯುವ ನೀರಿಗೆ ತೊಂದರೆಯಾಗಿದೆಯೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೋದ ಸಾರಿಯೂ ಆ ಕಡೆ ನೀರು ಬಂದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಳೆಯಿಲ್ಲದೆ ಬತ್ತನೆಯೇ ಆಗದಿರುವುದೂ ಮತ್ತು ಬತ್ತನೆಯಾಗಿದ್ದೂ ಫೈರೆಲ್ಲಾ ಸುಟ್ಟುಹೋಗುವುದೂ ಎರಡೂ ಒಂದೇ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಎರಡೂ ಒಂದೇ ಅಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅವರಿಗೂ ಕಂದಾಯದ ರೆಮಿಷನ್ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಶಿವಮೊಗ್ಗ ತಾಲ್ಲೂಕಿನಲ್ಲಿ ಆಗಲೇ ಕಂದಾಯದ ರೆಮಿಷನ್ ಕೊಟ್ಟಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನೀವಿಲ್ಲಿ ಕಂದಾಯದ ರೆಮಿಷನ್ ಮಾಡಿದೆಯೆಂದು ಹೇಳುತ್ತೀರಿ; ಆದರೆ ಅಲ್ಲಿ ಕಂದಾಯ ವಸೂಲು ಮಾಡುತ್ತಿರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಅಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಲ್ಲಿ ಕಳೆದ ಐದು ವರ್ಷಗಳಿಂದಲೂ ಮಳೆ ಹೋಗಿದೆಯೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ವರ್ಷಗಳಲ್ಲಿ ಮಳೆ ಆಗಿದೆ. ಕೆಲವು ವರ್ಷಗಳಲ್ಲಿ ಆಗಿಲ್ಲ.

ಶ್ರೀ ಎಸ್ ಆರ್. ನಾಗಪ್ಪಶೆಟ್ಟಿ.—ತುಂಗಾನದಿಯ ಪಕ್ಕದಲ್ಲೂ ನಾರೆ ಕಟ್ಟಿಸಿಕೊಟ್ಟ ರೈತರಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದೇ ಪ್ರಯತ್ನ ನಡೆಯುತ್ತಿದೆ.

Water Supply to cities of Bangalore, Mysore and Kolar Gold Fields.

Q.—**186.** Sri G. PAPANNA (Sidlaghatta-Chickballapur).—

Will the Government be pleased to state:—

(*a*) whether water supply to Bangalore, Mysore and Kolar Gold Fields Cities is made by the Government or the concerned municipalities;

(*b*) the capital invested till now to provide water supply to these three cities and the revenue derived therefrom for the past three years (figures to be given separately in respect of each)?

A.—Sri Kadidal MANJAPPA (Minister for Revenue and Public Works).—

(*a*) Water supply is made by Government to Bangalore, Mysore and Kolar Gold Fields.

(*b*) Capital invested—

Bangalore—Rs. 1,36,48,274.
Mysore—Rs. 18,97,203.
Kolar Gold Fields—
Rs. 26,37,915.

Revenue realised—

Years	*Bangalore* Rs.	*Mysore* Rs.	*K.G.F.* Rs.
1950-51...	12,10,161	2,18,483	2 25,099
1951-52...	13,62,823	2,55,807	2,54,743
1952-53...	15,38,781	2,69,763	2,94,333

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತುಂಗಾನದಿಯ ಎರಡು ಪಕ್ಕಗಳಲ್ಲೂ ನಾರೆ ಕಟ್ಟಿಸಿಕೊಟ್ಟು, ರೈತರಿಗೆ ಅನುಕೂಲಮಾಡಿಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದೇ ಪ್ರಯತ್ನ ನಡೆಯುತ್ತಿದೆ.

ಶ್ರೀ ಜಿ. ಪಾಪಣ್ಣ.—ಈ ಪಟ್ಟಣಗಳಿಗೆ ನೀರು ನರಬರಾಯಿ ಮಾಡುವುದಕ್ಕೆ ವರ್ಷಕ್ಕೆ ಬೆಚ್ಚ ಎಷ್ಟಾಗುತ್ತದೆ?

*Sri Kadidal MANJAPPA.—That information is not readily available. I will furnish it later on.

Feeder Channel and Minor Tank Projects in Chitaldrug District.

Q.—**204.** Sri Mulka GOVINDA REDDY (Chitaldrug).—

Will the Government be pleased to state:—

(*a*) how many projects regarding feeder channels and putting up minor